# ದಿನನಿತ್ಯದ ಬಳಕೆ

ವಿಂಗಡಣಾ ಟೇಬಲ್ · ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP)



**1 ಸ್ವಲ್ಪ ತ್ಯಾಜ್ಯವನ್ನು ಟೇಬಲ್ ಮೇಲೆ ಸುರಿಯಿರಿ.**
ಹರಡಿ. ಎತ್ತರ ರಾಶಿ ಮಾಡಬೇಡಿ.



**2 ಆಹಾರವಲ್ಲದ ಎಲ್ಲವನ್ನೂ ಆರಿಸಿ ತೆಗೆಯಿರಿ.**
ಪ್ಲಾಸ್ಟಿಕ್, ಗಾಜು, ಲೋಹ, ಬಟ್ಟೆ, ಪೇಪರ್ ಕಪ್, ಫಾಯಿಲ್ ಮತ್ತು ಸ್ಟಿಕ್ಕರ್.



**3 ಬೇಡದ ವಸ್ತುಗಳನ್ನು ಚ್ಯೂಟ್‌ಗೆ ಹಾಕಿ.**
ಅವು ಕೆಳಗಿನ ಕ್ರೇಟ್‌ಗೆ ಬೀಳುತ್ತವೆ.



**4 ಚೂಪಾದ ವಸ್ತುಗಳನ್ನು ಗಟ್ಟಿ ಡಬ್ಬಿಗೆ ಹಾಕಿ.**
ಇಕ್ಕಳದಿಂದ ಎತ್ತಿ. ಬರಿಗೈಯಿಂದ ಎಂದಿಗೂ ಬೇಡ.

⚠ **ರಾಶಿಯೊಳಗೆ ಕೈ ಆಳವಾಗಿ ಹಾಕಬೇಡಿ. ಗಾಜು, ಸೂಜಿ ಒಳಗೆ ಅಡಗಿರಬಹುದು. ಮೊದಲು ಹರಡಿ.**



**5 ದೊಡ್ಡ, ಗಟ್ಟಿ ಮೂಳೆಗಳನ್ನು ಪಕ್ಕಕ್ಕೆ ಇಡಿ.**
ಸಣ್ಣ ಮೂಳೆಗಳು ಹೋಗಬಹುದು. ದೊಡ್ಡ ಮೂಳೆ ನಿಮ್ಮ ಯಂತ್ರಕ್ಕೆ ಸರಿಯೇ ಎಂದು ನಮ್ಮನ್ನು ಕೇಳಿ.



**6 ಆಹಾರ ತ್ಯಾಜ್ಯವನ್ನು ಮಾತ್ರ ಶ್ರೆಡರ್‌ಗೆ ಕಳುಹಿಸಿ.**



**7** **ಬೇಡದ ವಸ್ತುಗಳ ಕ್ರೇಟ್ ತುಂಬುವ ಮೊದಲು ಖಾಲಿ ಮಾಡಿ.**

ಅವನ್ನು ಒಣ ಕಸದ ಡಬ್ಬಿಗೆ ಹಾಕಿ.




**8** **ಕೆಲಸ ಮುಗಿದ ಮೇಲೆ ಸೋಪಿನಿಂದ ಕೈ ತೊಳೆಯಿರಿ.**

ಕೈಗವಸು ತೆಗೆದ ನಂತರ.

## ಏನು ಹಾಕಬೇಕು

### ✓ ಹಾಕಿ

**ಎಲ್ಲಾ ಆಹಾರ ತ್ಯಾಜ್ಯ**

ಹಣ್ಣು, ತರಕಾರಿ, ಮಾಂಸ, ಕೋಳಿ, ಮೀನು, ಚಿಪ್ಪುಗಳು, ಮೂಳೆಗಳು, ಪಾಸ್ತಾ, ಬೇಕರಿ ಪದಾರ್ಥಗಳು, ಚೀಸ್ ಮತ್ತು ಮೊಟ್ಟೆ ಸಿಪ್ಪೆ.

**ಆಹಾರ ಅಂಟಿದ ಕಾಗದ**

ನ್ಯಾಪ್ಕಿನ್, ಪೇಪರ್ ಟವೆಲ್, ಟೀ ಬ್ಯಾಗ್ ಮತ್ತು ಕಾಫಿ ಪುಡಿ.

**ಸಸ್ಯಗಳು**

ಹೂವುಗಳು, ಎಲೆಗಳು, ಹುಲ್ಲು ಮತ್ತು ಸಣ್ಣ ಕೊಂಬೆಗಳು.

**ಪ್ರಮಾಣೀಕೃತ ಕಾಂಪೋಸ್ಟ್ ಆಗುವ ವಸ್ತುಗಳು**

ಕಾಂಪೋಸ್ಟ್ ಆಗುವ ಚೀಲಗಳು (ASTM D6400), ಮರದ ಕಡ್ಡಿಗಳು ಮತ್ತು ಚಾಪ್‌ಸ್ಟಿಕ್‌ಗಳು.

### ✗ ಹಾಕಬೇಡಿ

- ✗ ದ್ರವಗಳು, ಗ್ರೀಸ್ ಮತ್ತು ಅಡುಗೆ ಎಣ್ಣೆ
- ✗ ಪ್ಲಾಸ್ಟಿಕ್, ಥರ್ಮಾಕೋಲ್, ಪಾರ್ಸೆಲ್ ಡಬ್ಬಿಗಳು ಮತ್ತು ಬಳಸಿ ಎಸೆಯುವ ಕಪ್‌ಗಳು
- ✗ ಗಾಜು ಮತ್ತು ಲೋಹ
- ✗ ಮೇಣದ ಕಾಗದ ಮತ್ತು ಮೇಣ ಲೇಪಿತ ರಟ್ಟು
- ✗ ರಬ್ಬರ್ ಬ್ಯಾಂಡ್, ತಂತಿ ಕಟ್ಟು ಮತ್ತು ಸ್ಟಿಕ್ಕರ್‌ಗಳು
- ✗ ಡಯಾಪರ್‌ಗಳು
- ✗ ಪ್ರಮಾಣೀಕೃತವಲ್ಲದ 'ಜೈವಿಕ ವಿಘಟನೀಯ' ವಸ್ತುಗಳು

⚠ **ಕಂಟ್ರೋಲ್ ಪ್ಯಾನೆಲ್ ತೆರೆಯಬೇಡಿ ಅಥವಾ ವೈರಿಂಗ್ ಮುಟ್ಟಬೇಡಿ. ವಿದ್ಯುತ್ ಆಘಾತವಾದರೆ ತಕ್ಷಣ ಮುಖ್ಯ MCB ಆಫ್ ಮಾಡಿ ನಮಗೆ ಕರೆ ಮಾಡಿ.**